ಮಾಡ್ತಿದ್ದೆ..." ಅತ್ತೆಯ ಒರಟು ಮಾತಿನ ಹಿಂದಿನ ಮೃದು ಹೃದಯದ ಅರಿವು ಮೊಟ್ಟಮೊದಲಬಾರಿಗೆ ಆಯ್ತೆನ್ನುವಂತೆ ಛಾಯನ ಕಣ್ಣುಗಳು ಹನಿಗೂಡಿದುವು.

"ಅತ್ತೇ, ಕೈ ಮುಗೀತೀನಿ. ಮತ್ತೆ ಈ ವಿಷಯ ನನ್ನೆದ್ರು ಎತ್ಬೇಡಿ. ನಿಮ್ಮನ್ನ ಒಬ್ಬಂಟಿ ಮಾಡಿ ನನ್ನ ಸುಖ ಕಂಡ್ಕೊಳ್ಳೋಕೆ ನನ್ಕೈಲಿ ಸಾಧ್ಯಿಲ್ಲ..."

"ಒಬ್ಬಂಟಿ ಮಾಡ್ಬೇಡ್ವೇ. ಬಂದು, ಹೋಗಿ ಮಾಡ್ತಿದ್ರೆ ಸಂಬಂಧ ಉಳ್ಕೊಂಡಿರುತ್ತೆ."

ಛಾಯಾ ಮಗನ ಕಡೆ ನೋಡಿದಳು. ಕೈ ನೀಡಿ ತೋರುಬೆರಳಿಂದ ಅವನನ್ನು ನಿರ್ದೇಶಿಸುತ್ತಾ ಕಟುವಾಗಿ ಕೇಳಿದಳು,

"ಅವನ ಕತೆ ಎಂತಾಗುತ್ತೇಂತ ಅಂದಾಜು ಮಾಡಿದೀರಾ? ಯಾರೋ ಕಂಡು ಗೊತ್ತಿಲ್ಲದೋರನ್ನ ತೋರಿಸಿ 'ಅಪ್ಪಾ..' ಅಂತ ಹೇಳಿಸ್ಬೇಕಾ?"

"ಮಗು ಅದು. ನಾವು ಏನು ಹೇಳ್ಕೊಟ್ರೆ ಅದೇ ಅಭ್ಯಾಸ ಆಗುತ್ತೆ. ಹೊಂದಿಕೊಳ್ಳುತ್ತೆ. ಅವಸರ ಮಾಡು ಅಂತ ಹೇಳಲ್ಲ ನಾನು. ಒಳ್ಳೇ ಜನ ಅಂತ ಗೊತ್ತುಮಾಡ್ಕೊಂಡ ಮೇಲೇ." ಗದ್ಗದಿಸಿತು ಸುನಂದಮ್ಮನ ಗಂಟಲು. ಇಂತಾದ್ದೊಂದು ಸಾಧ್ಯತೆಯ ಕುರಿತು ಯಾವತ್ತೂ ಯೋಚಿಸದಿದ್ದ ಛಾಯಾ ಅತ್ತೆಯ ತಲೆ ಕೆಲಸ ಮಾಡುತ್ತಿರುವ ಪರಿ ಕಂಡು ದಿಗ್ಭ್ರಾಂತಿಗೊಂಡಳು. 'ಅತ್ತೇ...' ಎಂದು ಅವಳು ಬಾಯಿ ತೆರೆಯುವುದರೊಳಗೆ ಸುನಂದಮ್ಮ ಹೇಳಿದರು,"ಅಷ್ಟೂ ಮೀರಿ ಮಗೂನ ಒಪ್ಕೊಳ್ದಿದ್ರೆ ನನ್ನ ಆಯುಷ್ಯ ಇದ್ದಷ್ಟು ದಿನ ಸಾಕ್ತೀನಿ ನಾನು. ಮುಂದಿಂದು ಮುಂದೆ..."

"ನನ್ನ ಮಗೂನ ಕಳ್ಕೋಳ್ಳೋದಾದ್ರೆ ಆ ಸೌಭಾಗ್ಯಕ್ಕೆ ನಾನು ಮತ್ತೊಂದು ಮದುವೆ ಆಗ್ಬೇಕಾ?"

"ಮಾತಿಗೆ ಹೇಳಿದ್ದು ಕಣೇ. ನಿನ್ನ ಜೊತೆ ನಿನ್ನ ಮಗನ್ನೂ ಒಪ್ಕೊಳ್ಳೋರು ಸಿಗಲಿ ನಿಂಗೆ. ಈ ಮನೆಗೆ ಏನಾದ್ರೂ ದುರದೃಷ್ಟ ಬಡ್ಕೊಂಡಿದ್ರೆ ಅದು ಇಲ್ಲಿಗೇ ಮುಗಿದು ಹೋಗ್ಲಿ..."

ಅಯ್ಯಬ್ಬಾ, ಇಷ್ಟೆಲ್ಲಾ ಯೋಚಿಸಿಬಿಟ್ಟಿದ್ದಾರಾ ಅತ್ತೆ?

"ನೀವು ಏನೇ ಹೇಳಿದ್ರೂ..." ಎನ್ನುವ ಛಾಯನ ಮಾತು ಮುಗಿಯುವುದಕ್ಕೆ ಮುನ್ನ ದನಿ ಜೋರು ಮಾಡಿ ಆದೇಶಿಸಿದರು ಸುನಂದಮ್ಮ,



"ಗೊತ್ತಿರೋರಿಗೆ ಹೇಳಿಟ್ಟಿರ್ತೀನಿ. ನನ್ನ ಮಾತು ಮೀರೋರಿಗೆ ಈ ಮನೇಲಿ ಜಾಗ ಇಲ್ಲ. ಇನ್ನೂ ನಾನು ಈ ಮನೆ ಯಜಮಾನಿ, ತಿಳ್ತಾ..."

'ಒಂದು ಬಾಡಿಗೆಮನೆ ಮಾಡ್ಕಂಡಿರೋಕೆ ಸಾಲುತ್ತೆ ನನ್ನ ಸಂಬಳ' ಎಂದು ಹೇಳಬೇಕೆನಿಸಿದರೂ ತುಟಿ ಒಡೆಯಲಿಲ್ಲ ಛಾಯಾ. ಅತ್ತೆಯ ಕಾಳಜಿಗೆ ಹೃದಯ ಕರಗಿ ಕಣ್ಣಲ್ಲಿ ದಳದಳ ನೀರಿಳಿಯುತ್ತಿದೆ. ಜಡ್ಡುಗಟ್ಟಿದ್ದ ಮನದೊಳಗೊಂದು ಸಂಚಲನ. 'ಎಲ್ಲಾ ಮುಗಿಯಿತು' ಅಂದುಕೊಂಡಲ್ಲಿಂದ ಮತ್ತೆ ಆರಂಭವಾಗುವುದೇ ಬದುಕು? ಗಟ್ಟಿ ಬಂಡೆಯೇ ನೀರಿನ ಸೆಳವಿಗೆ ಸಿಕ್ಕು ಸವೆಯುವಾಗ ತನ್ನ ಮನೋನಿಗ್ರಹವನ್ನು ನಿಕಷಕ್ಕೊಳಪಡಿಸುವುದು ಸಾಧ್ಯವೇ? ಸಾಧುವೇ? ದಿಕ್ಕೆಟ್ಟವಳಂತೆ ಅತ್ತೆಯ ಮುಖ ನೋಡಿದಳು ಛಾಯಾ. ಹೇಳಬೇಕಾದ್ದನ್ನು ಸಕಾಲದಲ್ಲಿ ಹೇಳಿ ಮುಗಿಸಿದೆನೆಂಬ ಸಮಾಧಾನ ಆ ಮುಖದಲ್ಲಿ ಕಂಡಂತೆನಿಸಿದ್ದು ಭ್ರಮೆಯಲ್ಲ ಎಂದು ಆ ಕ್ಷಣದಲ್ಲಿ ಅವಳಿಗೆ ಅನಿಸಿಬಿಟ್ಟಿತು.

●